# ಸಲ್ಮಾನ್ ದಂಡು

ಸಲ್ಮಾನ್ ಖಾನ್‌ನ 'ದಭಾಂಗ್ ಟೂರ್' ಲಂಡನ್ನಿನಲ್ಲಿ ಕಳೆದ ವಾರ ಭರ್ಜರಿ ಆರಂಭ ಕಂಡಿದೆ. ವೇದಿಕೆಯ ಮೇಲೆ ಪ್ರೇಕ್ಷಕರನ್ನು ದಂಗು ಬಡಿಸುವಂತೆ ಬಾಲಿವುಡ್ ತಾರೆಯರ ದೊಡ್ಡ ದಂಡೇ ನೆರೆದಿತ್ತು. ಸಲ್ಮಾನ್ ಜತೆಗೆ ಹಾಡು ಮತ್ತು ನೃತ್ಯಕ್ಕೆ ಹೆಜ್ಜೆ ಹಾಕಿದವರಲ್ಲಿ ಜಾಕ್ವೆಲಿನ್ ಫೆರ್ನಾಂಡಿಸ್, ಸೋನಾಕ್ಷಿ ಸಿನ್ಹಾ, ಮನೀಶ್ ಪೌಲ್, ಡೈಸಿ ಶಾ, ಸೂರಜ್ ಪಾಂಚೋಲಿ, ಪ್ರಭುದೇವ ಸೇರಿದ್ದರು. ಸಲ್ಮಾನ್ ಕರೆದರೆ ಯಾರೂ ಒಲ್ಲೆ ಎನ್ನುವುದಿಲ್ಲ. ಎಷ್ಟೆಲ್ಲ ಉಪದ್ವ್ಯಾಪಗಳ ನಡುವೆಯೂ ಇವತ್ತಿಗೂ ಬಾಲಿವುಡ್‌ನಲ್ಲಿ ಸಲ್ಮಾನ್ ಖಾನ್ ಒಂದು ರೀತಿಯ ಅಜಾತಶತ್ರುವೇ. ಆತನ ಸ್ಟೇಜ್ ಷೋಗಳಿಗೆ ಸಹತಾರೆಯರು ಕೇಳಿದಾಕ್ಷಣ ಒಪ್ಪಿಕೊಂಡು ಬರುತ್ತಾರೆ. ಅದಕ್ಕೂ ಎರಡು ಕಾರಣಗಳಿವೆಯಂತೆ: ಮೊದಲನೆಯದ್ದು ಸಲ್ಮಾನ್ ಷೋಗಳಿಗೆ ಭರ್ಜರಿ ಪ್ರಚಾರ ಸಿಗುತ್ತದೆ ಎನ್ನುವುದು. ಎರಡನೆಯದ್ದು, ಸಲ್ಮಾನ್ ತಮ್ಮ ಬಗ್ಗೆ ಸಿಟ್ಟು ಮಾಡಿಕೊಂಡರೆ ಉಳಿಗಾಲವಿಲ್ಲ ಎನ್ನುವುದು!





# ರಾಯಭಾರಿ ಪ್ರಿಯಾಂಕಾ

ಪ್ರಿಯಾಂಕಾ ಚೋಪ್ರಾ ಒಂದು ರೀತಿಯಲ್ಲಿ ಈಗ ಅಂತರರಾಷ್ಟ್ರೀಯ ತಾರೆ. ಕಳೆದ ವಾರ ಮುಂಬೈಯಲ್ಲಿ ಅಸೌಖ್ಯದಿಂದ ಚೇತರಿಸಿಕೊಂಡ ಹಿರಿಯ ನಟ ದಿಲೀಪ್ ಕುಮಾರ್ ಅವರನ್ನು ಭೇಟಿಯಾಗಿ ಕುಶಲ ವಿಚಾರಿಸಿದ ಪ್ರಿಯಾಂಕಾ, ಮರುದಿನ ಟೊರೆಂಟೋದಲ್ಲಿದ್ದಳು. ಅಲ್ಲಿ ಅಂತರರಾಷ್ಟ್ರೀಯ ಫಿಲಂ ಫೆಸ್ಟಿವಲ್‌ನಲ್ಲಿ ಈಕೆ ಅತಿಥಿ. ಜತೆಗೆ ಈಕೆ ನಟಿಸಿದ ಸಿಕ್ಕಿಂ ಭಾಷೆಯ 'ಪಹುನಾ' ಚಿತ್ರ ಪ್ರದರ್ಶನವಿತ್ತು. ಅದರ ಮರುದಿನ ನೋಡಿದರೆ ಜೋರ್ಡಾನ್ ದೇಶದ ಅಮ್ಮಾನ್‌ನಲ್ಲಿ ಪುಟ್ಟ ಮಕ್ಕಳ ಶಾಲೆಯೊಂದರಲ್ಲಿ ಪ್ರಿಯಾಂಕಾ ಹಾಜರ್! ಆ ಬಳಿಕ ನೋಬೆಲ್ ಪ್ರಶಸ್ತಿ ವಿಜೇತೆ ಮಲಾಲಾ ಮನೆಗೆ ಭೇಟಿ.

ಯುನಿಸೆಫ್‌ನ 'ಸದಾಶಯ ರಾಯಭಾರಿ' ಆಗಿರುವ ಪ್ರಿಯಾಂಕಾ, ಜೋರ್ಡಾನ್‌ನಲ್ಲಿರುವ ಸಿರಿಯನ್ ನಿರಾಶ್ರಿತರ ಮಕ್ಕಳಿಗೆ ಶಿಕ್ಷಣಕ್ಕೆ ನೆರವೀಯಲು ಅಮ್ಮಾನ್‌ಗೆ ತೆರಳಿದ್ದರು. ಯುನಿಸೆಫ್ ರಾಯಭಾರಿಯಾಗಿ ಜಗತ್ತಿನಾದ್ಯಂತ ದುಃಖಿತಪ್ತ ಮಕ್ಕಳನ್ನು ಭೇಟಿಯಾಗಿ ಸಂತೈಸುವುದು, ಅವರ ಪುನರ್ವಸತಿ ಮತ್ತು ಶಿಕ್ಷಣಕ್ಕೆ ದೇಣಿಗೆ ಸಂಗ್ರಹಿಸುವುದು ಪ್ರಿಯಾಂಕಾಳ ಪ್ರಿಯ ಹವ್ಯಾಸ. ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯಳಾಗಿರುವ ಪ್ರಿಯಾಂಕಾ, ತನ್ನೆಲ್ಲ ತಿರುಗಾಟ ಮತ್ತು ಚಟುವಟಿಕೆಗಳ ಫೋಟೋಗಳನ್ನು ಇನ್‌ಸ್ಟಾಗ್ರಾಮ್‌ನಲ್ಲಿ 'ಅಪ್‌ಲೋಡ್' ಮಾಡುತ್ತಲೇ ಇರುತ್ತಾಳೆ. ಎಷ್ಟೋ ಜನ ಅದನ್ನು ಮೆಚ್ಚಿದರೆ ಇನ್ನು ಕೆಲವರು ಚುಚ್ಚುವುದೂ ಉಂಟು. ಆದರೆ ಚುಚ್ಚುವವರೂ ಬೆಚ್ಚುವಂತೆ ಉತ್ತರ ಕೊಡುವುದರಲ್ಲಿ ಪ್ರಿಯಾಂಕಾ ಬಹಳ ಚೂಟಿ.

ಕಳೆದ ವಾರ ಪ್ರಿಯಾಂಕಾಳ ಜೋರ್ಡಾನ್ ಭೇಟಿಯನ್ನು ಟೀಕಿಸಿದ ಒಬ್ಬಾತ ಜಾಲತಾಣದಲ್ಲಿ, 'ಹಾಗೆಯೇ ಭಾರತದ ನೂರಾರು ಹಳ್ಳಿಗಳಲ್ಲೂ ಬಡ ಶಿಕ್ಷಣವಂಚಿತ ಮಕ್ಕಳಿದ್ದಾರೆ, ಅವರನ್ನೂ ಭೇಟಿಯಾಗಿ ಪ್ರಿಯಾಂಕಾ' ಎಂದು ಬರೆದಿದ್ದ. ಅದಕ್ಕೆ ತಕ್ಷಣ ಉತ್ತರಿಸಿದ ಪ್ರಿಯಾಂಕಾ, 'ಕಳೆದ 12 ವರ್ಷಗಳಿಂದ ನಾನು ಭಾರತದಲ್ಲಿ ಯುನಿಸೆಫ್‌ನ ರಾಯಭಾರಿಯಾಗಿ ಕೆಲಸ ಮಾಡಿದ್ದೇನೆ. ಆಗ ನೂರಾರು ಹಳ್ಳಿಗಳಿಗೆ ತೆರಳಿ ಶಿಕ್ಷಣವಂಚಿತ ಕೊಳೆಗೇರಿ ಮಕ್ಕಳನ್ನು ಭೇಟಿಯಾಗಿ ನೆರವು ನೀಡಿದ್ದೇನೆ. ನೀವೆಲ್ಲಿಗಾದರೂ ಹೋದದ್ದು ಇದೆಯಾ...?' ಎಂದು ಮರುಪ್ರಶ್ನೆ ಹಾಕಿದ್ದಾಳೆ! 'ಮಕ್ಕಳು ಜಗತ್ತಿನ ಯಾವ ದೇಶದಲ್ಲಿದ್ದರೂ ಮುಗ್ಧ ಮಕ್ಕಳೇ. ಅವರ ನಡುವೆ ಬೇಧ ಬೇಡ' ಎನ್ನುವುದು ಪ್ರಿಯಾಂಕಾ ನುಡಿಮುತ್ತು.

■ ಬಿಂದು